## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ. ನಂ. 45/2019** **ಪ್ರಾ.ಸಾ –8**

**ದಿನಾಂಕಃ 28.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಸತೀಶ್ ಎನ್ ಕೆ |
| ತಂದೆಯ ಹೆಸರು | : | ಪೌತಿ ಎಂ. ಕುಮಾರನ್ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ನೌಕರರು |
| ವಾಸ ಸ್ಥಳ | : | ಗೋಣಿಕೊಪ್ಪ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 2016 ಡಿಸೆಂಬರ್ ರಿಂದ ಜೂನ್ 2025 ರ ತನಕ ಸಮದಾಯ ಆರೋಗ್ಯ ಕೇಂದ್ರ ಕುಟ್ಟದಲ್ಲಿ ವೈದ್ಯಾರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 04.02.2018 ರಂದು ಸುಮಾರು ರಾತ್ರಿ 08.00 ಗಂಟೆಗೆ ಚಾಸಾ 1 ರವರು ಹಲ್ಲೆಯ ಹಿನ್ನಲೆಯಲಿ ತಪಾಸಣೆಗಾಗಿ ಶ್ರೀಮಂಗಲ ಪೊಲೀಸರು ಕರೆತಂದಿದ್ದು ಸದರಿ ವ್ಯಕ್ತಿಯನ್ನು ಪರಿಶೀಲಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1) ಬಲ ಎದೆಯ ಭಾಗದಲ್ಲಿ ನೋವು ಉಂಟಾಗಿರುತ್ತದೆ. ಬೇರೆ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ. ಸದರಿ ಗಾಯ ಸಾಮಾನ್ಯ ಸ್ವರೂಪದ್ದಾಗಿರುತ್ತದೆ. ಈ ಬಗ್ಗೆ ಗಾಯದ ನಿ ಪಿ 6 ದೃಡೀಕರಣ ಪತ್ರವನ್ನು ನೀಡಿದ್ದು ಸಹಿಯನ್ನು ನಿ ಪಿ 6(ಬಿ) ಎಂದು ಗುರುತಿಸಲಾಯಿತು.

**CC. No. 45/2019** **PW - 8**

<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀಮತಿ ಸಿ. ಕೆ. ಆರ್ ವಕೀಲರಿಂದಃ</u>

ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಗಾಯದ ಪ್ರಮಾಣ ಪತ್ರದಲ್ಲಿ ಇಲ್ಲ ನಾವು ಅದನ್ನು ಕೇಳುವುದಿಲ್ಲ. ಕೇವಲ ನೋವು ಕಂಡು ಬಂದಿದ್ದು ಆ ನೋವಿಗೆ ಸಮಯ ಹೇಳಲು ಬರುವುದಿಲ್ಲ. ವ್ಯಕ್ತಿ ಆಧಾರ ನೋವನ್ನು ಗುರುತಿಸಿದ್ದು ಮೇಲ್ನೋಟಕ್ಕೆ ಯಾವುದೇ ರೀತಿ ಗಾಯವಾದ ಬಗ್ಗೆ ಕಂಡು ಬರಲಿಲ್ಲ. ನೋವು ಇತ್ತು ಎಂದು ಹೇಳುವ ಸ್ಥಳದಲ್ಲಿ ಯಾವುದೇ ಹಲ್ಲೆ ಮಾಡಿರುವುದು ಕಂಡು ಬರಲಿಲ್ಲ. ಪೊಲೀಸರ ಕೋರಿಕೆಯಂತೆ ಗಾಯದ ಪ್ರಮಾಣ ತಪ್ಪಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ <u>ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ